ಓ ಎಸ್. ನಂ.87/2020

ಪಿ.ಡಬ್ಲೂ: 1

**ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಆರ್.ಕೆ ವಕೀಲರಿಂದಃ**

ನನ್ನ ತಂದೆ ಕಾಶಪ್ಪ ತೀರಿಕೊಂಡು 40 ರಿಂದ 50 ವರ್ಷಗಳಾಯಿತು. 9 ಮತ್ತು 10 ಪ್ರತಿವಾದಿಯರ ಮದುವೆಯನ್ನು ನನ್ನ ತಂದೆ ಜೀವಿತಾವದಿಯಲ್ಲಿ ಮಾಡಿರುತ್ತಾರೆ. ನನ್ನ ಮದುವೆಯನ್ನು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಗಂಡ ಈರಪ್ಪ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಒಟ್ಟು 70 ಎಕರೆ ಇರುತ್ತದೆ. ಅವುಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ಎಷ್ಟು ಹೊಲಗಳು ಹಿರಿಯರರಿಂದ ಬಂದವು, ಎಷ್ಟು ಜಮೀನುಗಳನ್ನು ಖರೀದಿಸಿರುತ್ತಾರೆ ಅಂತ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಮನೆ ಇರುತ್ತದೆ. ಸದರಿ ಮನೆಯಲ್ಲಿ 1 ನೇ ಪ್ರತಿವಾದಿ ರವರು ಇರುತ್ತಾರೆ. ಸದರಿ ಮನೆಯು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಅದನ್ನು ನಂತರ ಸೇರಿಸಿರುತ್ತೇನೆ. ನನ್ನ ತಂದೆಯಾದ ಕಾಶಪ್ಪನ ಹೆಸರಿನಲ್ಲಿ ಇರುವ ಸದರಿ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 3 ಮತ್ತು 4 ಹಿರಿಯರಿಂದ ಬಂದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಅದು ನನ್ನ ತಂದೆ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ನನ್ನ ತಂದೆಯಿಂದ ಬಂದ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅವುಗಳನ್ನು ತನ್ನ ಮಕ್ಕಳ ಹೆಸರಿನಲ್ಲಿ ಮಾಡಿರುತ್ತಾನೆ. ದಾವಾ ಐಟಂ ನಂ.4 ನೇ ಆಸ್ತಿಯಾದ 72/1 ಆ ಕ್ಷೇತ್ರ 12 ಎಕರೆ ಜಮೀನು 1 ನೇ ಪ್ರತಿವಾದಿ ಖರೀದಿಸಿರುತ್ತಾನೆ ಎಂದರೆ ಸರಿ. ಸದರಿ ಜಮೀನು ಮೊದಲು ನಿಂಗಪ್ಪ ತಂದೆ ನಂದಪ್ಪ ಪೂಜಾರಿ ಇವರ ಹೆಸರಿನಲ್ಲಿ ಇತ್ತು ಅಂದರೆ ಸರಿಯಲ್ಲ. ನಾನು ಈ ದಾಖಲಿಸುವ ಸಮಯದಲ್ಲಿ ಸದರಿ ಜಮೀನು ಹೇಗೆ ಬಂತು ಅಂತ ನೋಡಿರುತ್ತೇನೆ. ಸಾಕ್ಷಿಯು ಮುಂದುವರೆದು ನನ್ನ ತಂದೆಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ.

2. 1969 ರಲ್ಲಿ ನಿಂಗಪ್ಪ ತಂದೆ ನಂದಪ್ಪ ಪೂಜಾರಿಯಿಂದ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ಸರ್ವೇ ನಂ.72/1/2 ಕ್ಷೇತ್ರ 12 ಎಕರೆ 2 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ಗಂಡ ಈರಪ್ಪ ಇತನು 3 ನೇ ಪ್ರತಿವಾದಿಯ ಹೆಸರಿನಲ್ಲಿ

ಓ ಎಸ್. ನಂ.87/2020

ಪಿ.ಡಬ್ಲೂ: 1

ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. 1969 ರಿಂದ 1 ನೇ ಪ್ರತಿವಾದಿಯೇ ದಾವಾ ಐಟಂ ನಂ.4 ದಾವಾ ಆಸ್ತಿಯ ಮಾಲೀಕ ಮತ್ತು ಕಬ್ಜದಾರನಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾಯು ಸದರಿ ಜಮೀನನ್ನು ಸ್ವತ ಸ್ವಂತ ಖರೀದಿಸಿರುವುದರಿಂದ ನನಗಾಗಲಿ ಮತ್ತು ಉಳಿದ ಪ್ರತಿವಾದಿಯರಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

3. ನನ್ನ ಮದುವೆ ಮಾಡುವ ಸಮಯದಲ್ಲಿ ಹಣ ಮತ್ತು ಬಂಗಾರ ಕೊಟ್ಟಿದ್ದರಿಂದ ಏನು ಆಸ್ತಿ ಬೇಡ ಅಂತ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು 9 ರಿಂದ 11 ರವರ ಒಪ್ಪಿಗೆ ಪಡೆದು ಉಳಿದ ಆಸ್ತಿಗಳನ್ನು ತಮ್ಮ ಹೆಸರಿನಲ್ಲಿ ದಾಖಲಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮಗೆ ಆಸ್ತಿಯಲ್ಲಿ ಬೇಡ ನೀವೆ ಮಾಡಿಕೊಳ್ಳಿ ಅಂದಿದ್ದರಿಂದ ನನ್ನ ಸಹೋದರರು ತಮ್ಮ ಹೆಸರಿನಲ್ಲಿ ದಾಖಲಿಸಿಕೊಡಿದ್ದಾರೆ ಎಂದರೆ ಸರಿಯಲ್ಲ. ನಾನಾಗಲಿ ಮತ್ತು 9 ರಿಂದ 11 ನೇ ಪ್ರತಿವಾದಿಯಾಗಲಿ ಮದುವೆಯಾದಗಿಂದ ಗಂಡನ ಮನೆಯಲ್ಲಿ ಇರುತ್ತೇವೆ ಎಂದರೆ ಸರಿ. ನಾವು ಕೂಡು ಕಟುಂಬ ಇಲ್ಲದದ್ದರೂ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 6 ನೇ ಪ್ರತಿವದಿಯರನ್ನು ಅವರ ಪರ ವಕೀಲರು ಗೈರು ಹಾಜರು ಇರುದರಿಂದ ಸದರಿಯವರು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.